

# ಮೊಸಳೆಯ ಹೊಟ್ಟೆಯಲ್ಲಿ ಬಂಗಾರದ ಗಟ್ಟಿ

■ ವನರಾಗ ಶರ್ಮಾ

ಕಲೆ: ಸಂತೋಷ್ ಸಸಿಹಿತ್ಲು

ಹಿಂದೆ ಗ್ರೀಕ್ ದೇಶದ ಪಟ್ಟಣವೊಂದರಲ್ಲಿ ಹೇಲಾಕ್ ಸೇಠ್ ಎಂಬ ಒಬ್ಬ ಪ್ರಸಿದ್ಧ ವರ್ತಕನಿದ್ದ. ಅವನು ತನ್ನ ಗ್ರಾಹಕರನ್ನೇ ವಂಚಿಸಿ ಹಣ ಗಳಿಸುತ್ತಿದ್ದ. ದಾನ ಧರ್ಮ ಮಾಡುವುದು ಬಹು ದೂರದ ಮಾತಾಗಿತ್ತು ಅವನಿಗೆ. ನಿತ್ಯದ ಜೀವನಕ್ಕೆ ಖರ್ಚು ಮಾಡುವಾಗಲೂ ಅಳೆದೂ ತೂಗಿ ಖರ್ಚು ಮಾಡುವಷ್ಟು ಜಿಪುಣ. ಹಾಗೆ ಗಳಿಸಿ ಉಳಿಸಿದ ಹಣ ಯಾವತ್ತೋ ಒಂದು ದಿನ ಕಳ್ಳರ ಪಾಲಾಗುತ್ತಿತ್ತು. ಇಲ್ಲವೇ ಕಳೆದು ಹೋಗುತ್ತಿತ್ತು. ಮತ್ತೆ ಮತ್ತೆ ಹೀಗೇ ಆಗುತ್ತಿದ್ದರಿಂದ ಅವನ ಕೈಯಲ್ಲಿ ದುಡ್ಡು ಉಳಿಯುತ್ತಲೇ ಇರಲಿಲ್ಲ. ಪಟ್ಟ ಶ್ರಮವೆಲ್ಲಾ ವ್ಯರ್ಥವಾಯಿತಲ್ಲ ಎಂದು ಆಗೆಲ್ಲ ಕೊರಗುತ್ತಿದ್ದ. ಇದನ್ನೆಲ್ಲ ನೋಡುತ್ತಿದ್ದ ಹೇಲಾಕನ ಸೊಸೆ ಇಲೇನಾ, 'ನೀವು ಪ್ರಾಮಾಣಿಕವಾಗಿ ಗಳಿಸಿರಿ. ಕೈಲಾದಷ್ಟು ದಾನ ಧರ್ಮ ಮಾಡಿ. ನೀವು ಕಷ್ಟಪಟ್ಟು ದುಡಿದ ಹಣ ಎಲ್ಲಿಗೂ ಹೋಗೋದಿಲ್ಲ. ಅದು ಮಾತ್ರ ನಿಮ್ಮದೇ ಆಗಿರುತ್ತದೆ. ಎಲ್ಲಿಯೇ ಹೋದರೂ ನಿಮಗೇ ಸಿಗುತ್ತದೆ. ನಿಮ್ಮ ಬಳಿಗೇ ಹಿಂದಿರುಗುತ್ತದೆ. ನಿಮ್ಮದಲ್ಲದ ದುಡ್ಡು ಹೊರಟು ಹೋಗುತ್ತದೆ' ಎಂದು ಒಮ್ಮೆ ಹೇಳಿದಳು.

ಇಲೇನಾ ಪರೋಪಕಾರಿ ಭಾವನೆಯನ್ನು ಹೊಂದಿದ್ದಳು. ಕಷ್ಟದಲ್ಲಿರುವ ಜನರ ನೆರವಿಗೆ ಧಾವಿಸುತ್ತಿದ್ದ ಅವಳನ್ನು ಜನ 'ದಯಾಳು ಇಲೇನಾ' ಎಂದೇ ಕರೆಯುತ್ತಿದ್ದರು. ಹೇಲಾಕನಿಗೂ ಸೊಸೆಯ ಮಾತು ಸರಿಯಾಗಿಯೇ ಇದ್ದೀತು ಎಂದು ಅನಿಸಿತು. ವಂಚನೆಯ ಹಣ ನಮ್ಮ ದುಃಖಕ್ಕೆ ಕಾರಣವಾಗುತ್ತದೆ ಎಂದು ಅವನ ಮನಸಾಕ್ಷಿಯೂ ಹೇಳಿತು. ಅಂದಿನಿಂದ ಆತ ವಂಚನೆಯಿಲ್ಲದೇ ಪ್ರಾಮಾಣಿಕವಾಗಿ ಹಣ ಗಳಿಸತೊಡಗಿದ. ಅನಂತರ 'ಪರೀಕ್ಷಿಸಿಯೇ ನೋಡೋಣ' ಎಂದು ಗಳಿಸಿದ ಹಣದಿಂದ ಒಂದು ಬಂಗಾರದ ದೊಡ್ಡದಾದ ಗಟ್ಟಿಯನ್ನು ಮಾಡಿಸಿದ. ಮತ್ತು ಅದರ ಮೇಲೆ ತನ್ನ ಹೆಸರು ಟಂಕಿಸಿ, ಒಂದು ಬಟ್ಟೆಯಲ್ಲಿ ಸುತ್ತಿ ನಾಲ್ಕು ರಸ್ತೆ ಕೂಡುವ ವೃತ್ತದಲ್ಲಿ ರಾತ್ರಿ ಯಾರೂ ಇಲ್ಲದ ಸಮಯ ನೋಡಿ ಎಸೆದು ಬಂದ. ಅದು ಜನ ಹೋಗಿ ಬರುವ ದಾರಿ ಆಗಿತ್ತು. ಯಾರೂ ಅದರ ಬಗ್ಗೆ ಗಮನ ಹರಿಸಿರಲಿಲ್ಲ.

ನಾಲ್ಕು ಮಂದಿ ದಾರಿಹೋಕರ ಗುಂಪೊಂದು ಇದನ್ನು ಗಮನಿಸಿತು. ಇದೇನೋ 'ಯಾರೋ ಬೇಡದ ವಸ್ತ್ರದ ಗಂಟು ಒಗೆದು ಹೋಗಿದ್ದಾರೆ' ಎಂದುಕೊಂಡು ಅದನ್ನು ಸನಿಹದಲ್ಲಿಯೇ ಹರಿಯುತ್ತಿರುವ ಹೊಳೆಗೆ ಎಸೆದು ಹೋದರು. ಅದನ್ನು ಹೊಳೆಯಲ್ಲಿರುವ ಒಂದು ಮೊಸಳೆ ನುಂಗಿತು. ಅದೊಂದು ದಿನ ಬಲೆಹಾಕಿ ಮೀನು ಹಿಡಿಯುತ್ತಿದ್ದ ಮೀನುಗಾರರ ಬಲೆಯಲ್ಲಿ ಆ ಮೊಸಳೆ ಸಿಲುಕಿಕೊಂಡಿತು. ಬಲೆಯನ್ನು ದಂಡೆಗೆ ಎಳೆದು ತಂದ ಮೀನುಗಾರರು ಮೊಸಳೆಯನ್ನು ಹೊರತೆಗೆದರು. ಮತ್ತು ಅದನ್ನು ಸೀಳಿದರು. ಆಗ ಅದರಲ್ಲಿ ಹರಿದ ವಸ್ತ್ರದ ಗಂಟಿನಲ್ಲಿರುವ ಒಂದು ಬಂಗಾರದ ಗಟ್ಟಿ ಕಂಡಿತು. ಆ ಗಟ್ಟಿಯ ಮೇಲೆ 'ಹೇಲಾಕ್ ಸೇಠ್' ಎಂದು ಟಂಕಿಸಲಾದ ಹೆಸರನ್ನು ಅವರು ಓದಿದರು. ಪಟ್ಟಣದಲ್ಲಿ ಪ್ರಸಿದ್ಧನಾದ ಅವನ ಪರಿಚಯ ಮೀನುಗಾರರಿಗೆ ಇತ್ತು. ಅವರು ಸೀದಾ ಹೇಲಾಕನ ಬಳಿಗೆ ಬಂದು 'ಇದೋ ನಿಮ್ಮ ಚಿನ್ನದ ಗಟ್ಟಿ, ಮೊಸಳೆಯ ಹೊಟ್ಟೆಯಲ್ಲಿ ಸಿಕ್ಕಿತು' ಎಂದು ಅವನಿಗೆ ಅದನ್ನು ಒಪ್ಪಿಸಿದರು. ಅವರ ಪ್ರಾಮಾಣಿಕತೆಗೆ ಮೆಚ್ಚಿದ ಹೇಲಾಕ್ ಅವರಿಗೆ ಸೂಕ್ತ ಬಹುಮಾನ ಕೊಟ್ಟು ಸತ್ಕಾರ ಮಾಡಿ ಕಳಿಸಿದ. ಮತ್ತು ಸೊಸೆ ಇಲೇನಾಳನ್ನು ಕೂಡಲೇ ಕರೆದು, 'ನೀನು ಹೇಳಿದ ಮಾತಿನಲ್ಲಿ ಸತ್ಯವಿದೆ. ನಾವು ಪ್ರಾಮಾಣಿಕವಾಗಿ ಗಳಿಸಿದ ಹಣ, ಸಂಪತ್ತು ಎಲ್ಲಿಯೂ ಹೋಗುವುದಿಲ್ಲ. ಮರಳಿ ನಮ್ಮ ಕೈಸೇರುತ್ತದೆ' ಎಂದು ಹೇಳಿದ.

ಸೊಸೆ ಇಲೇನಾ ಮುಗುಳ್ನಗುತ್ತ 'ನೀವು ಈಗ ನಿಜವಾದ ವರ್ತಕರಾಗಿದ್ದೀರಿ. ಸನ್ಮಾರ್ಗದಲ್ಲಿ ನಡೆಯಹತ್ತಿದ್ದೀರಿ. ನಮ್ಮ ಕುಟುಂಬಕ್ಕೂ, ಜನರಿಗೂ ಹಿತವಾಗುತ್ತದೆ. ನಿಮಗೆ ಕೃತಜ್ಞತೆ' ಎಂದಳು. ■